3. ಮೊಹತಫರ್ನಾ ವಸೂಲಾತಿ ಹೋದವರುಷಕ್ಕಿಂತ ಈ ವರುಷ ಬಹಳ ಕಮ್ಮಿಯಾಗಿರುತ್ತೆ ಸಾಲು ಆಖ್ಯೈರು ಆಗುತ್ತಾ ಬೆರುತ್ತಾದ್ದರಿಂದ ವಸೂಲಾತಿಗೆ ಕ್ರಮವಾದ ಏರ್ಪಾಡು ಮಾಡುವದು ಅವಶ್ಯಕವಾಗಿರುತ್ತೆ.

4. ಹಿಂದೆ ವಸೂಲಾತಿ ವಗೈರೆ ವಿಷಯದಲ್ಲಿ ಸಜಸ್ಟು ಮಾಡಿದ ಮೇರೆ ಇದುವರಿಗೂ ಯಾವ ಏರ್ಪಾಡು ಮಾಡಿದ ಹಾಗೆ ಕಂಡುಬಂದಿಲ್ಲಾ.

(ಸೈ॥ಡಿ) ಎ॥. ಶ್ರೀಕಂಠೈಯ್ಯಾ.
(ಸೈ॥ಡಿ) ಕೃಷ್ಣಪ್ಪಾಜಿ ಅರಸ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 7ನೆ ಮೇ 1909.

1909ನೆ ಇಸವಿ ಜುಲೈ ಗುರ್ಜಿ ಲಾಗಾಯಿತು 1910ನೆ ಇಸವಿ ಜೂನ್ ಆಖ್ಯೈರ್ ವರಿಗೆ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಟೋಲ್ ಗೇಟಿನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ತೀರ್ಥಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿಜೂ॥ ಮಾಹೆ 10ನೆ ತಾರೀಖಿನಲ್ಲಿ ಡೆಪ್ಯೂಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದಲೂ, ಮತ್ತು ನಗರದ ತಾಲ್ಲೂಕು ಹೈದರ್‌ಗರ್‌ಫೋಟ್, ಲಕ್ಷ್ಮೀಪುರ, ಟೋಲ್ ಗೇಟುಗಳಲ್ಲಿ ಸುಂಕವನ್ನು ವಸೂಲ್ಮಾಡುವ ಬಾಬನ್ನು ಕಳೂರುಕಟ್ಟೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ 8ನೆ ತಾರೀಖಿನಲ್ಲಿ ನಾಗರದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರಿಂದಲೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ಬಾಬನ್ನು ಹರಾಜಿನಲ್ಲಿ ಪಡೆಯುವ ಕಂಟ್ರಾಕ್ಟ್‌ದಾರನು ಇದಕ್ಕೆ ಲಗತ್ತಿರುವ ಪೆಡ್ಯೂಲಿನಲ್ಲಿ ನಮೂದಿಸಿರುವ ದರದಂತೆ ಸುಂಕವನ್ನು ವಸೂಲ್ಮಾಡಬಹುದು; ಪರಂತು ಅದರಲ್ಲಿ ನಮೂದಾಗುವದಕ್ಕಿಂತ ಜಾಸ್ತಿ ದರವನ್ನು ಎಂದೂ ವಸೂಲ್ ಮಾಡಕೂಡದು. ಕಂಟ್ರಾಕ್ಟ್‌ದಾರನು ಲೇಟ್ ಚೀಫ್ ಕಮಿಷನರವರ 1876ನೆ ಇಸವಿ ನವಂಬರು 4ನೆ ಮುರ್ತುಂ ನಂಬರು 274ನೆ ಇಸ್ತಿಹಾರಿನಲ್ಲಿ ಪ್ರಕಟವಾಗಿರುವ ರೂಲ್ಸುಗಳಿಗೆ ಅನುಸರಿಸಿ ನಡದುಕೊಳ್ಳತಕ್ಕದ್ದು. ಸರಕಾರಿ ಸೊತ್ತು ಮತ್ತು ಸರಕಾರಿ ಕೆಲಸದಮೇಲೆ ಪ್ರಯಾಣ ಮಾಡುವ ಸರಕಾರಿ ನೌಕರರೂ ಸುಂಕದಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಛಡ ಸವಾಲನ್ನಾಗಲೀ ಯಾ ಇತರ ಸವಾಲನ್ನಾಗಲೀ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯೂಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

4. ದರಖಾಸ್ತು ಅಂಗೀಕರಿಸಲ್ಪಟ್ಟವರಿಂದ ಕಂಟ್ರಾಕ್ಟು ಮೊಬಲಗು ಎಂಟು ಸಮವಾದ ಖಿಸ್ತುಗಳಾಗಿ ವಸೂಲ್ಮಾಡಲ್ಪಡುವದು. ಈ ಪೈಕಿ ಎರಡು ಖಿಸ್ತುಗಳ ಮೊಬಲಗನ್ನು ಹರಾಜು ಮುಗಿದಕೂಡಲೇ ಡಿಪಾಜಿಟ್ಟಾಗಿ ವಸೂಲು ಕೊಡತಕ್ಕದ್ದು. ಈ ಡಿಪಾಜಿಟ್ ಮೊಬಲಗು ಆಖ್ಯೈರು ಎರಡು ಖಿಸ್ತುಗಳ ಬಗ್ಯೆ ಜಮಾ ಮಾಡಲ್ಪಡುತ್ತೆ. ಬಾಕಿ ಆರು ಖಿಸ್ತುಗಳನ್ನು 1909ನೆ ಡಿಸೆಂಬರ್ 20ರ ಲಾಗಾಯಿತು ಪ್ರತಿ ಮಾಹೆಯಲ್ಲೂ ಆಯಾ ಮಾಹೆ ತಾರೀಖು 20ರ ಒಳಗಾಗಿ ತಪ್ಪದೆ ವಸೂಲ್ ಕೊಡತಕ್ಕದ್ದು. ಮಾಹೆಯಾನ ಖಿಸ್ತುಗಳನ್ನು ಕ್ರಮವಾಗಿ ಪಾವತಿ ಮಾಡುತ್ತಾಬರುವ ಬಗ್ಯೆ ಕಂಟ್ರಾಕ್ಟ್‌ದಾರನು ಸರಿಯಾದ ಜಾಮೀನು ಕೊಡತಕ್ಕದ್ದು. ಮತ್ತು ಹರಾಜು ಮುಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು ಮೂರು ದಿವಸದೆ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರದುಕೊಡಬೇಕು.

5. ಹರಾಜು ಮುಗಿದಕೂಡಲೇ ಡಿಪಾಜಿಟ್ ಮೊಬಲಗು ವಸೂಲ್ ಕೊಡದೆಯೂ, ಜಾಮೀನ್ ಕೊಡದೆಯೂ ಇದ್ದರೆ ಅಂಗೀಕರಿಸಲ್ಪಟ್ಟ ಸವಾಲ್ದಾರನನ್ನು ನಷ್ಟಕ್ಕೆ ಗುರಿಪಡಿಸಿ, ಕಂಟ್ರಾಕ್ಟ್ ದುಸರಾ ಹರಾಜು ಮಾಡಲ್ಪಡುವದು. ಖಿಸ್ತು ಸಕಾಲಕ್ಕೆ ಪಾವತಿಮಾಡುವದರಲ್ಲಿ ತಪ್ಪಿದರೆ ಮಾಹೆಯಾನಾ ರೂಪಾಯಿ ಬಂದರ ಬಾದು ಪೈ ಯಂತೆ ಪಾವತಿ ತಾರೀಖು ವರೆಗೆ ಒಡ್ಡಿಯು ವಸೂಲ್ಮಾಡಲ್ಪಡುವದು. ಅಲ್ಲದೆ ಡೆಪ್ಯೂಟಿ ಕಮಿಷನರವರ ಇಷ್ಟಾನುಸಾರವಾಗಿ ಕಂಟ್ರಾಕ್ಟ್ ಎರಡನೆ ಹರಾಜಿಗೆ ಗುರಿಮಾಡಲ್ಪಟ್ಟು ಎರಡನೇ ಹರಾಜಿನಲ್ಲಿ ಕಮ್ಮಿಯಾಗುವ ಮೊಬಲಗನ್ನು ಕಂಟ್ರಾಕ್ಟ್‌ದಾರನಿಂದಾಗಲೀ ಅಥವಾ ಅವನ ಜಾಮೀನುದಾರನಿಂದಾಗಲೀ ವಸೂಲ್ಮಾಡಲ್ಪಡುವದು.

6. ಕಂಟ್ರಾಕ್ಟ್‌ರಿಂದ ಅಥವಾ ಅವನ ಜಾಮೀನುದಾರನಿಂದ ಬರಬೇಕಾಗಿರುವ ಬಾಕೀ ಮೊಬಲಗು ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆಗಳಿಗೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಮೇಲೆ 4ನೆ ಮತ್ತು 5ನೆ ಪ್ಯಾರಾಗಳಲ್ಲಿ ಹೇಳಿರುವ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟ್‌ದಾರನು ಹರಾಜು ಮೊಬಲಗಿಗೆ ಸೇರಿಸಿ ಟ್ರೈಜರೀಗೆ ಪಾವತಿಯಾದ ಕಂಟ್ರಾಕ್ಟ್ ಮೊಬಲಗು ಮೇಲೆ ರೂಪಾಯಿ ಬಂದರ ಬಂದಾಣಿಯ ಮೇರೆ ಲೋಕಲ್ ಸೆಸ್ಸು ಕೊಡಲು ಬದ್ಧನಾಗಿರುತ್ತಾನೆ.

8. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟ್‌ದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳ ತನಿಖೆಗೆ ಒಳಗಾಗಿರತಕ್ಕದ್ದು.

9. ಕಂಟ್ರಾಕ್ಟ್‌ದಾರನು ಸುಂಕ ವಸೂಲ್ಮಾಡುವ ಬಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲ್ ಗೇಟ್ ಬಳಿ ಬಹಿರಂಗವಾದ ಸ್ಥಳದಲ್ಲಿ ತಗಲುಹಾಕತಕ್ಕದ್ದು.

10. ಗವರ್ನ್‌ಮೆಂಟಿನಿಂದ ನೇಮಿಸಲ್ಪಟ್ಟ ಟೋಲ್ ಗೇಟ್ ಬಳಿಯಲ್ಲಿ ಅಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟ್‌ದಾರನು ಸುಂಕವನ್ನು ವಸೂಲ್ಮಾಡಕೂಡದು.

11. ಕಂಟ್ರಾಕ್ಟುದಾರನು ಘಾಟಿ ಸುಂಕದ ಮನೆಯನ್ನು ಮತ್ತು ಗೇಟನ್ನು ಉಪಯೋಗಿಸಿಕೊಳ್ಳಬಹುದು. ಆತನು ಅವುಗಳನ್ನು ಸರಿಯಾದ ರಿಪೇರಿಯಲ್ಲಿ ಇಟ್ಟುಕೊಂಡಿರಬೇಕು.

ದರ ತೋರಿಸುವ ಪೆಡ್ಯೂಲು.

		ರೂ.	ಆ.	ಪೈ.
1.	ನಾಲ್ಕು ಚಕ್ರದ ಗಾಡಿ 1ಕ್ಕೆ	2	0	0
2.	ಎರಡು ಚಕ್ರದ ಗಾಡಿ 1ಕ್ಕೆ	1	0	0
3.	ಯಕ 1ಕ್ಕೆ	0	4	0
4.	ಬಿಲ್ಲು ಇರುವ ಹ್ಯಾಕ್ನಿ ಗಾಡಿ 1ಕ್ಕೆ	0	2	0
5.	ಬಿಲ್ಲು ಇಲ್ಲದೆ ಇರುವ ಎತ್ತುಗಳಿಂದ, ಕೋಣಗಳಿಂದ ಅಥವಾ ಕುದುರೆಗಳಿಂದ ಯಳಿಯ ಲ್ಪಡುವ ಗಾಡಿ ಅಥವಾ ಹ್ಯಾಕ್ನಿ 1ಕ್ಕೆ.	1	8	0
6.	ಡಿಟೋ ಡಿಟೋ ಖಾಲಿಯಾಗಿದ್ದರೆ	0	8	0
7.	ಡಿಟೋ ಡಿಟೋ ಆರು ಎತ್ತುಗಳು ವಗೈರೆಯಿಂದ ಯಳಿಯಲ್ಪಡುವ ಗಾಡಿ ಭರ್ತಿ ಇದ್ದರೆ	0	12	0
8.	ಡಿಟೋ ಡಿಟೋ ಖಾಲಿ ಇದ್ದರೆ	0	6	0
9.	ಡಿಟೋ ನಾಲ್ಕು ಎತ್ತುಗಳಿಂದ ಭರ್ತಿ ಇದ್ದರೆ	0	8	0
10.	ಡಿಟೋ ಖಾಲೀ ಇದ್ದರೆ	0	4	0
11.	ಡಿಟೋ ಎರಡು ಎತ್ತುಗಳಿಂದ ಯಳಿಯಲ್ಪಡುವ ಭರ್ತಿ ಇದ್ದರೆ ಗಾಡಿ 1ಕ್ಕೆ ...	0	4	0
12.	ಡಿಟೋ ಖಾಲಿ ಇದ್ದರೆ ಗಾಡಿ 1ಕ್ಕೆ ...	0	2	0
13.	ಡಿಟೋ ಒಂದು ಎತ್ತಿನಿಂದ ಯಳಿಯಲ್ಪಡುವ ಭರ್ತಿ ಇದ್ದರೆ ...	0	1	0
14.	ಡಿಟೋ ಖಾಲಿ ಇದ್ದರೆ ...	0	0	3
15.	ಆನೆ 1ಕ್ಕೆ	1	8	0
16.	ಒಂಟೆ 1ಕ್ಕೆ ಹೊರೆ ಇದ್ದರೆ	0	8	0
17.	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18.	ಕುದುರೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡುತ್ತಿದ್ದರೆ	0	1	6
19.	ಡಿಟೋ ಹೊರೆ ಇಲ್ಲದೆ ಇದ್ದರೆ ಅಥವಾ ಹಿಡಿದುಕೊಂಡುಹೋಗುತ್ತಾ ಇದ್ದರೆ...	0	0	9
20.	ತಟ್ಟು ಅಥವಾ ಹೇಸರಕತ್ತೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡುತ್ತಾ ಇದ್ದರೆ.	0	0	9
21.	ತಟ್ಟು ಅಥವಾ ಹೇಸರಕತ್ತೆ 1ಕ್ಕೆ ಹೊರೆ ಇಲ್ಲದೆ ಇದ್ದರೆ ಅಥವಾ ಹಿಡಿದುಕೊಂಡು ಹೋ ಗುತ್ತಾ ಇದ್ದರೆ	0	0	6
22.	ಕತ್ತೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡಲ್ಪಡುತ್ತಾ ಇದ್ದರೆ ...	0	0	6
23.	ಡಿಟೋ ಹೊರೆ ಇಲ್ಲದೆ ಇದ್ದರೆ ಅಥವಾ ನಡಿಸಿಕೊಂಡು ಹೋಗುತ್ತಾ ಇದ್ದರೆ	0	0	1
24.	ಕುರಿ, ಮೇಕೆ, ಅಥವಾ ಹಂದಿ 1ಕ್ಕೆ	0	0	1
25.	ಎಂಟು ಜನರಿಂದ ಹೊರಲ್ಪಟ್ಟ ಪಲ್ಲಕ್ಕಿ, ಡೋಲಿ ಅಥವಾ ಟಾಂಜ್ಯಾ ...	1	0	0
26.	ಆರು ಜನರಿಂದ ಡಿಟೋ ಡಿಟೋ ...	0	12	0
27.	ನಾಲ್ಕು ಜನರಿಂದ ಡಿಟೋ ಡಿಟೋ ...	0	8	0
28.	ಎರಡು ಜನರಿಂದ ಡಿಟೋ ಡಿಟೋ ...	0	4	0

ನೋಟ್.—ಕಾಲುನಡೆಯಾಗಿ ಹೋಗುವ ಪ್ರಯಾಣೀಕರಮೇಲೆ ಸುಂಕ ವಸೂಲ್ಮಾಡಕೂಡದು.

ಎ. ಮೃತ್ಯುಂಜಯ ಐಯರ್, ಛಾರ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ರ 1909ನೆ ಮೇ ತಿಂಗಳು 14ನೆ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಸ್ರ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಜೂನ್ ಆಖೈರು ವರಿಗೆ ಹರಿಹರದ ನೇತುವೆಮೇಲೆ ಟೋಲ್ ವಸೂಲ್ಮಾಡತಕ್ಕ ಹಕ್ಕನ್ನು ಚಾಲ್ತಿಸೂಲ್ ಜೂನ್ ತಿಂಗಳು 25ನೆ ತಾರೀಖು ಶುಕ್ರವಾರದ ದಿವಸ ಹರಿಹರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರ ಕಛೇರಿಯಲ್ಲಿ ಆ ದಿನ ಮಧ್ಯಾಹ್ನ ಮೂರು ಘಂಟೆಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಯವರು ಹರಾಜು ಮಾಡಿಸುತ್ತಾರೆ.